

ನೋಡಿಕೊಂಡರು. ಟಿ.ಬಿ. ಪೇಷೆಂಟ್ ತರಹ ಇದ್ದ ನಾನು ಅವರ ಮನೆಗಳಲ್ಲಿ ತಿಂದುಂಡೇ ದಪ್ಪಗಾದದ್ದು. ಅಲ್ಲಿ ಮುಸ್ಲಿಮರ ಗಟ್ಟಿತನ ಸಾರುವ ಬಂದೇನವಾಜ್ ದರ್ಗಾ ಇದೆ. ಶರಣ ಬಸವೇಶ್ವರ ಜಾತ್ರೆ ನಡೆಯುತ್ತವೆ. ಅಲ್ಲಿನ ಸಾಮರಸ್ಯ ಕಂಡರೆ ಹಲವು ಕತೆಗಳು ಮನಸ್ಸಿನಲ್ಲಿ ಮೂಡುತ್ತವೆ. ಮುಂದೆ ನಾನು 'ಕಲ್ಲರಳಿ ಹೂವಾಗಿ' ಬರೆಯಲು ಅದೇ ಪ್ರೇರಣೆ. ಚಿಂಚೋಳಿಯ ಹಳ್ಳಿಯೊಂದರಲ್ಲಿ 'ಬೆತ್ತಲೆ ಸೇವೆ' ನಡೆಯುತ್ತಿತ್ತು. ಅದನ್ನು ನೋಡಲು ಕಾರಿನಲ್ಲಿ ಜನ ಹೋಗುತ್ತಿದ್ದರು. ಪಾಪ, ದಲಿತ ಹೆಣ್ಣುಮಕ್ಕಳು ಎನಿಸಿತು. ಅದನ್ನೇ ಆಮೇಲೆ ಕಾದಂಬರಿಯಾಗಿಸಿದೆ. ಮೊದಲು ಕತೆ ಬರೆದಿದ್ದೆ. ಅದಕ್ಕೆ ಬಹುಮಾನ ಬಂತು. ನಂತರ ಅದೇ ಕಾದಂಬರಿಯಾಗಿ, ಸಿನಿಮಾ ಕೂಡ ಆಯಿತು. ಆರೋಗ್ಯ ಇಲಾಖೆಯಲ್ಲಿ ನಾನು ಇದ್ದುದರಿಂದ ಅನೇಕ ರೀತಿಯ ಜನರ ಭೇಟಿ ಸಾಧ್ಯವಾಗುತ್ತಿತ್ತು. ಎಲ್ಲರಿಂದಲೂ ಸಿಗುತ್ತಿದ್ದ ಕತೆಗಳನ್ನು ಗಮನಿಸುತ್ತಿದ್ದೆ. 'ಮದಕರಿನಾಯಕ' ನಾಟಕವನ್ನು ಮೊದಲು ಆಡಿದ್ದೇ ನನ್ನ ಕರುವಿನಕಟ್ಟೆಯ ಜನ. ಆಗಲೇ ಅದು ನನ್ನನ್ನು ಕಾಡಿತ್ತು. ಹೀಗೆ ಅನುಭವಕ್ಕೆ ಬಂದ ಎಷ್ಟೋ ದ್ರವ್ಯಗಳು ಕಾದಂಬರಿಗಳಾಗಿವೆ.

◆ ಸಿನಿಮಾ ಆಗಲಿ ಎಂದೇ ನೀವು ಕಾದಂಬರಿ ಬರೆದದ್ದು ಉಂಟಾ?

ಇಲ್ಲ. ನಾನು ಯಾವತ್ತೂ ಹಾಗೆ ಯೋಚಿಸಲೇ ಇಲ್ಲ. ಕಾದಂಬರಿ ಬರೆದ ಮೇಲೆ ಸಿನಿಮಾ ಮಾಡಲು ಕೆಲವರು ಉತ್ಸಾಹ ತೋರಿಸಿದಾಗಲೂ, ಅರ್ಧದಷ್ಟು ಭಾಗ ಧಾರಾವಾಹಿಯಾಗಿ ಪತ್ರಿಕೆಯಲ್ಲಿ ಪ್ರಕಟವಾದ ಮೇಲೆಯೇ ಸಿನಿಮಾ ಮಾಡಬೇಕು ಎಂದು ಷರತ್ತು ಹಾಕುತ್ತಿದ್ದೆ. ಪತ್ರಿಕೆ ಪ್ರಸಾರದ ಸಂಖ್ಯೆ ಹೆಚ್ಚಳದಲ್ಲೂ ನನ್ನ ಕಾದಂಬರಿಗಳ ಪಾತ್ರವಿತ್ತು ಎನ್ನುವುದು ಹೆಮ್ಮೆಯ ವಿಷಯ.

'ದುರ್ಗದ ಬೇಡರ್ದಂಗೆ' ಎಂಬ ಕಾದಂಬರಿ ಬರೆದೆ. ಅದಕ್ಕೆ ಪ್ರೇರಣೆ ತುಮಕೂರಿನ ಸಂಶೋಧಕ ಬಿ. ನಂಜುಂಡಸ್ವಾಮಿ. 1857ರ ಸಿಪಾಯಿ ದಂಗೆಗೂ ಮೊದಲೇ ಅಂದರೆ 1849ರಲ್ಲಿಯೇ ದುರ್ಗದ ಬೇಡರು ದಂಗೆ ಎದ್ದಿದ್ದರು ಎಂಬ ಸಂಗತಿಯನ್ನು ಅವರು ತಿಳಿಸಿದರು. ಡಾಬ್ಸ್ ಎನ್ನುವವನು ಆಗ ಇದ್ದರು. ತುಮಕೂರು, ದುರ್ಗಕ್ಕೆ ಅವರು ಆಗ ಡಿವಿಷನಲ್ ಕಲೆಕ್ಟರ್. ದಂಗೆ ಎದ್ದು, ರಾಮಗಿರಿ ಕಾಡಿನಲ್ಲಿ ಅಡಗಿದ್ದ ಬೇಡರನ್ನು ಬ್ರಿಟಿಷರು ಮುಗಿಸಿದರು. ಪ್ರೊ. ಲಕ್ಷ್ಮಣ ತೆಲಗಾವಿ ಅವರನ್ನು ಈ ಕುರಿತು ನಾನು ವಿಚಾರಿಸಿದೆ. ಅವರು ನಂಬರ್ ಕೊಟ್ಟರು. ಎಲ್ಲ ಮಾಹಿತಿ ಒದಗಿಸಿಕೊಟ್ಟರು. ನನ್ನ ಕಾದಂಬರಿಗಳ ಹಿಂದಿನ ಇತಿಹಾಸಕ್ಕೆ ಸಂಬಂಧಿಸಿದ ಬಹುಪಾಲು ಹೂರಣವನ್ನು ಲಕ್ಷ್ಮಣ ತೆಲಗಾವಿ ಅವರೇ ಒದಗಿಸಿದ್ದಾರೆ, ಅವರ ಸಂಶೋಧನೆ ಸದಾ ನನ್ನ ಹಿಂದೆ ಇದೆ. ಡಾಬ್ಸ್ 1881ರಲ್ಲಿ ಬರೆದಿದ್ದ ಕೃತಿಯೊಂದು ನನಗೆ ಸಿಕ್ಕಿತು. ಅದರಿಂದ ಕಾದಂಬರಿ ರಚನೆಗೆ ಅನುಕೂಲವಾಯಿತು. ಅದು ಪ್ರಕಟವಾಗುತ್ತಿದೆ. 'ಸುರಪುರದ ರಾಜಾ ವೆಂಕಟಪ್ಪನಾಯ್ಕ' ಎಂಬ ಇನ್ನೊಂದು ಕಾದಂಬರಿ ಬರೆಯುತ್ತಿದ್ದೇನೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡಿತಿ' ಓದಿದಾಗ ನಾವು ಬರೆಯಲು ಏನಿದೆ ಎನಿಸಿತ್ತು. ಆಮೇಲೆ ದಲಿತ ಸಮಸ್ಯೆಗಳನ್ನು ಇಟ್ಟುಕೊಂಡೇ ನಾನು ಬರೆದೆ.